PW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

## CC No.561/2024

ದಿನಾಂಕ 27.06.2025 ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ : -

ನನಗೂ ಸ್ವಾಮಿರವರಿಗೂ ಪರಿಚಯ ಇಲ್ಲ. ಸ್ವಾಮಿರವರು ಜೆಸಿಬಿ ಸಂಬಂಧ ಬ್ಯಾಂಕಿನಲ್ಲಿ ಲೋನ್ ಗಾಗಿ ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಬ್ಯಾಂಕಿನಿಂದ ಸಿಬಿಲ್ ಇಲ್ಲ ಎಂದು ಲೋನ್ ಆಗಲಿಲ್ಲ ಎಂದರೆ ಸರಿಯಲ್ಲ.

ನನಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಖಾತೆ ಇರುತ್ತದೆಂದರೆ ಸರಿ. ನನ್ನ ಬ್ಯಾಂಕ್ ಖಾತೆ ಮೂಲಕ ಜೆಸಿಬಿ ತೆಗೆದುಕೊಳ್ಳಬೇಕೆಂದು ನಾನು ಸ್ವಾಮಿ ನಿರ್ಧಾರ ಮಾಡಿದೆವು ಎಂದರೆ ಸುಳ್ಳು. ಅದೇ ರೀತಿ ಸ್ವಾಮಿರವರು ನನ್ನ ಖಾತೆಯ ಮೂಲಕ ಜೆಸಿಬಿಗೆ ಲೋನ್ ಪಡೆಯಲು ಅರ್ಜಿ ಸಲ್ಲಿಸಿದರು ಎಂದರೆ ಸುಳ್ಳು. ಅದೇ ರೀತಿ ಜೆಸಿಬಿ ಪಡೆಯಲು ಬ್ಯಾಂಕಿನಿಂದ ನನ್ನ ಖಾತೆಯ ಆಧಾರದ ಮೇರೆಗೆ ಲೋನ್ ಮಂಜೂರಾಯಿತು ಎಂದರೆ ಸುಳ್ಳು. ಅದರಂತೆ ಆರೋಪಿ ನನಗೆ ಮಂಜೂರಾದ ಲೋನ್ ಪಡೆದುಕೊಂಡು ಸಂಬಂಧಪಟ್ಟ ಇಲಾಖೆಯಿಂದ ಜೆಸಿಬಿ ಖರೀದಿ ಮಾಡಿದರು ಎಂದರೆ ಸುಳ್ಳು. ಅದರಂತೆ ಜೆಸಿಬಿ ನನ್ನ ಹೆಸರಿನಲ್ಲಿ ಮಂಜೂರಾದರೂ ಸಹಿತ ಅದರ ಸ್ವಾಧೀನ ಆರೋಪಿಯ ಬಳಿ ಇತ್ತು ಎಂದರೆ ಸರಿಯಲ್ಲ. ಅದರಂತೆ ಸದರಿ ಸಾಲದ ಕಂತುಗಳನ್ನು ಪ್ರತಿ ತಿಂಗಳು ಆರೋಪಿಯೇ ತುಂಬುತ್ತಿದ್ದರು ಎಂದರೆ ಸುಳ್ಳು. ಸಾಲವನ್ನು ಆರೋಪಿಯು ಪೂರ್ತಿಯಾಗಿ ಭರ್ತಿ ಮಾಡಿ ನಂತರ ಜೆಸಿಬಿಯನ್ನು ಆತನ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು.

ಅವರ ಹಾಗೂ ನನ್ನ ಮಧ್ಯೆ ಸದರಿ ಜೆಸಿಬಿ ಸಂಬಂಧ ವ್ಯವಹಾರದಲ್ಲಿ ಕೆಲವು ಚೆಕ್ಕುಗಳು ನನ್ನ ಬಳಿ ಉಳಿದುಕೊಂಡವು ಎಂದರೆ ಸರಿಯಲ್ಲ. ಜೆಸಿಬಿ ನಾನು ಖರೀದಿ ಮಾಡಿರುವುದಾಗಿ ಹೇಳಿದ್ದು ಈ ಸಂಬಂಧ

ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ. ಅದೇ ರೀತಿ ದಿನಾಂಕ 07.07.2020 ಮತ್ತು 04.12.2020 ಈ ಸಂಬಂಧ ಆದ ಚೆಕ್ ವ್ಯವಹಾರಗಳನ್ನು ತೋರಿಸಲು ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ಹಾಗೂ ಆರೋಪಿಯ ಮಧ್ಯೆ ಜೆಸಿಬಿ ಸಂಬಂಧ ಮಾರಾಟ ಮಾಡುವ ವ್ಯವಹಾರ ಆಗಿದ್ದು ಅದಂತೆಯೇ 16 ಲಕ್ಷ 50 ಸಾವಿರಕ್ಕೆ ಮಾತುಕತೆಯಾಗಿ ನವೆಂಬರ್ 2020 ರಲ್ಲಿ ಜೆಸಿಬಿಯನ್ನು ಮಾರಾಟ ಮಾಡಿರುವಂತೆ ತೋರಿಸಲು ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ. 4 ಲಕ್ಷ ನಗದಾಗಿ ಹಣ ಕೊಟ್ಟಿರುವುದಾಗಿ ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ.

ಆರೋಪಿಯು ಹೆಚ್ ಡಿ ಎಫ್ ಸಿ ಬ್ಯಾಂಕಿನ ಬಿಡದಿ ಶಾಖೆಯ ಚೆಕ್ಕನ್ನು ನೀಡಿದ್ದರು. ಸದರಿ ನಿಪಿ-1 ಚೆಕ್ಕಿನ ಖಾತೆ ಕೆಂಪೇಗೌಡರ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾತೆ ಜಂಟಿ ಖಾತೆಯಾಗಿದ್ದು ಕೆಂಪೇಗೌಡ ಹಾಗೂ ಸ್ವಾಮಿ ಇವರ ಹೆಸರಿನಲ್ಲಿ ಇದೆ ಎಂದರೆ ಈ ಬಗ್ಗೆ ನನಗೆ ಗೊತ್ತಿಲ್ಲ. ಕೆಂಪೇಗೌಡರ ಸಹಿ ನಿಪಿ-1 ರಲ್ಲಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಂಟಿ ಖಾತೆಯ ಚೆಕ್ಕಿನಲ್ಲಿ ಆರೋಪಿಯ ಸಹಿಯನ್ನು ಪೋರ್ಜರಿ ಮಾಡಿ ಬ್ಯಾಂಕಿಗೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸದರಿ ನಿಪಿ-1 ರ ಪ್ರಕಾರ ಜಂಟಿ ಖಾತೆಯಿದ್ದು ನಾನು ಕೆಂಪೇಗೌಡರಿಗೆ ಚೆಕ್ ನಗದೀಕರಣವಾಗದೇ ಇದ್ದಾಗ ನೋಟೀಸು ಕಳುಹಿಸಲಿಲ್ಲ ಎಂದರೆ ಸರಿ. ಸದರಿ ದೂರಿನಲ್ಲೂ ಸಹಿತ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ಸದರಿ ಬಿಡದಿ ಶಾಖೆಯಲ್ಲಿದ್ದ ಕೆಂಪೇಗೌಡರ ಖಾತೆಯನ್ನು ದಿನಾಂಕ 18.08.2020 ರಲ್ಲಿ ಅವರು ಕ್ಲೋಸ್ ಮಾಡಿಸಿದ್ದಾರೆಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅವರು ಖಾತೆಯನ್ನು ಕ್ಲೋಸ್ ಮಾಡಿಸಿದ್ದರೂ ಸಹಿತ ನಾನು ಸದರಿ ಚೆಕ್ಕನ್ನು ದುರುಪಯೋಗ ಪಡಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಹಣ ಪಡೆಯಬೇಕೆಂಬ

ದುರುದ್ದೇಶದಿಂದ ಅವರ ಚೆಕ್ಕನ್ನು ದುರ್ಬಳಕೆ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**